ನಿಲ್ಲಿಸಲಾಗಲಿಲ್ಲ ಪುಟ್ಟಿಗೆ. ಅಲ್ಲಿಂದ ಸುದೀರ್ಘ ಹದಿಮೂರು ನಿಮಿಷಗಳ ನರಕ. ತ್ರಾಸಪಟ್ಟುಕೊಂಡು ಒಳಗೆ ನಡೆದಿದ್ದ ದೇಹ ನಡೆದು ಹೋಗೇ ಇಲ್ಲದಂತೆ ಮಾಯ! ತನ್ನ ದೇಹಭಾರಕ್ಕೆ, ಬೊಜ್ಜಿಗೆ, ಸಂಧಿವಾತಕ್ಕೆ ಮತ್ತು ಈ ಮೂರನ್ನೂ ಗುಣಮಾಡಿಸುತ್ತೇನೆಂದು ಸಾವಿರಾರು ರೂಪಾಯಿ ಕರಗಿಸಿದ ಪೇಟೆಯ ಭಟ್ಟನಿಗೆ ಶಾಪಹಾಕುತ್ತಾ ಒಳಗೆ ಹೋದವರ ಕಾಯುತ್ತ ಕೂತವಳ ಲೆಕ್ಕದಲ್ಲಿ ಮೂವತ್ತು ಬಹುಮುಖ್ಯ ನಿಮಿಷಗಳೇ ಕಳೆದುಹೋಗಿದ್ದವು. ಉದ್ದನೆಯ ಕಾಲುದಾರಿಯಂತಿದ್ದ ಮನೆಯ ಜಾಗದಲ್ಲಿ ಹಿತ್ತಿಲಬಾಗಿಲಿನೆಡೆಗೆ ಎಂಬಂತೆ ಕತ್ತಲಿನಲ್ಲಿ ನೇರ ನಡೆದು ಹೋಗಿ, ಕೊನೆಗೆ ಹೊರಳಿಕೊಂಡ ರಾಜೇಶ್ವರಿಯಮ್ಮ ಮತ್ತೆ ಬಹಳ ಹೊತ್ತಿನವರೆಗೆ ಕಾಣಿಸಲಿಲ್ಲ. ಅತ್ತ ನೋಡಬಾರದು, ನೋಡಿದರಡ್ಡಿಯಿಲ್ಲ, ನೋಡಲಾಗದೆ ಇರಲಾಗದು ಎಂಬಿತ್ಯಾದಿ ಅನಿಸಿಕೆ ಅಭಿಪ್ರಾಯಗಳಲ್ಲಿ ತನ್ನನ್ನೇ ದಣಿವುಮಾಡಿಕೊಂಡವಳಿಗೆ, ಅಲ್ಲಿ ತಾನು ಬಂದಲ್ಲಿ, ಈಗ ಈ ಕ್ಷಣ ಏನಾಗಿರಬಹುದೆಂಬ ಚಿತ್ರಣ ಮೂಡತೊಡಗಿತು.

ಕರಾವಳಿಯ ಯಲ್ಲಾಪುರದ ಡಿಸೆಂಬರ್ ಚಳಿಯ ರುದ್ರನರ್ತನಕ್ಕೆ ಚಾಟಿಯೇಟಿನಂತ ಬೀಸುಚುರುಕು ಗಾಳಿಗೆ, ತುಂಬಾ ಅನುಕೂಲಸ್ಥ ಮನೆಯ ಎಲ್ಲಾ ಕಿಟಕಿ, ಬಾಗಿಲು, ಸಂದಿಗೊಂದಿಗಳು ಮುಚ್ಚಿದ್ದಂತೆ ಹೊರಗೆ ಕ್ಷಣ ಕ್ಷಣ ಬಿಸಿಲೇರಲು ಶುರುಮಾಡಿದ್ದೇ ಮನೆಯ ಒಳಗೆ ಒಂಥರಾ ಬೆವರು, ರೋಗಿಷ್ಟ ಉಸಿರು, ಕಮಟುಬಟ್ಟೆಯ ವಾಸನೆ ಹೆಚ್ಚಾಗುತ್ತಾ ಬಂದಂತಾಯಿತವಳಿಗೆ..

ಮರುಕ್ಷಣವೇ ಇದು ತನ್ನಿಂದಲೇ ಬರುತ್ತಿರಬಹುದಾ.. ಬೆಳಗ್ಗಿನ ಪರಿಸ್ಥಿತಿಗೆ ತನ್ನ ಮೈಮೇಲೆ ಎಂಥ ಬಟ್ಟೆಯಿದೆ, ತಾನು ಹೇಗೆ ಕಾಣುತ್ತಿದ್ದೇನೆ ಎನ್ನುವ ಯೋಚನೆ ಅರೆಸೆಕೆಂಡೂ ಬಾರದವಳಿಗೆ ಈಗ ಮೈಲಿಗೆಯ ಮನೆಯೊಳಗೆ ಕೂತು, ದೂಳುಪಾದದಲ್ಲಿ, ಬೆವರು ಮೈಯಲ್ಲಿ, ಕೆದರುಗೂದಲಲ್ಲಿ, ಗುಡ್ಡಿಗೂ ಹೋಗದೆ.. ದೊಡ್ಡ ಅಪರಾಧವೆಸಗಿದೆನಾ ಎಂಬ ಆತಂಕ ಮುತ್ತಿಕೊಂಡಿತು. ತಾನು ಮುಟ್ಟಿಸಲು ಬಂದ ವಿಷಯ ಬಹು ಸಹಜವಾಗಿದ್ದರೆ, ತೀರಾ ಸಾಮಾನ್ಯದ್ದಾಗಿದ್ದರೆ ಇವರ ನಿದ್ರೆಯನ್ನು ಕೆಡಿಸಿದ್ದಕ್ಕೆ, ಇವರ ಮನೆಯನ್ನು ಮೈಲಿಗೆ ಮಾಡಿದ್ದಕ್ಕೆ, ಏನು ಆಗಬಹುದು. ತನ್ನ ಪೆದ್ದುತನಕ್ಕೆ ತನ್ನ ವಯಸ್ಸಿಗೆ ಕ್ಷಮಿಸಿಬಿಡಬಹುದು. ಆದರೆ, ಭಟ್ಟರ ಮನೆಯೊಳಗೆ ಎದ್ದಮುಖದಲ್ಲಿ ಬಂದ ಹುಡುಗಿಯ ಕಥೆಯನ್ನು ತಮ್ಮವರೇ ಇವರ ಮನೆ ಹಿತ್ತಲಿನಲ್ಲಿ ಅಡಿಕೆ ಸುಲಿಯುತ್ತ ಆಡಿಕೊಂಡು ನಗಬಹುದು. ಆಗ ತನ್ನ ಆಯಿಗೆಷ್ಟು ಅವಮಾನವಾದೀತು... ಎಂದು ಒಮ್ಮೆ ತಾನು ಹೊರಟು ಬಂದಾಗ ಸೌದೆಗೆಂದು ಬೆಳಗ್ಗೆಯೇ ತುರ್ತಿನಲ್ಲೆಂಬಂತೆ ಹೊರಟು ಹೋಗಿದ್ದವಳ ನೆನೆದುಕೊಂಡಳು.

ಗೂಡಿನಲ್ಲಿದ್ದ ಹಳೆಯ ಅಲಾರ್ಮ್ ಗಡಿಯಾರದ ಸದ್ದು ಆತಂಕ ಹೆಚ್ಚಿಸತೊಡಗಿತು. ಮೂಗು ತಿಕ್ಕಿಕೊಂಡಳು. ಮಾಸಿದ ಗಾಳಿಯ ಮಿಶ್ರವಾಸನೆಯಲ್ಲಿ ದೇವರ ದೀಪದ ಎಣ್ಣೆ ವಾಸನೆಯೂ, ಮುಗ್ಗುಬಂದ ಅಕ್ಕಿಯ ವಾಸನೆಯೂ ಸೇರಿಹೋಗಿರಬಹುದೆಂದು ಅವಳು ಚುರುಕು ಮೂಗಿನ ಹೊರಳೆಗಳು ಅರಳಿ ಕಂಡುಹಿಡಿದವು. ಈಗ ಇನ್ನೊಂದು ಕೆಟ್ಟ ಕಮಟು ವಾಸನೆ ಇಲ್ಲಿಗೆ ಸೇರಿಕೊಳ್ಳಬಹುದೇ. ನಾನು ಅಂದುಕೊಂಡದ್ದು ನಿಜವೇ ಆಗಿದ್ದರೆ ನಾಳೆ ಇಷ್ಟೊತ್ತಿಗೆ ಹೀಗೆ ಇವರು ಮೈಮರೆತು ನಿದ್ದೆ ಮಾಡಲಾರರಲ್ಲವೇ... ಅಂದುಕೊಂಡಳು.

ಇಂಥ ಅನುಕೂಲಸ್ಥರ ಮನೆಯಲ್ಲಿ ಕೂತು ತನ್ನ ಕಣ್ಣುಗಳನ್ನು ಸ್ವಚ್ಛಂದ ತಿರುಗಾಡಲು ಬಿಟ್ಟು ಏನೆಲ್ಲಾ ಮಾಹಿತಿಯನ್ನು ಒಂದೇ ಏಟಿಗೆ ಗ್ರಹಿಸಿದ್ದಕ್ಕೆ ಮತ್ತು ಇನ್ನೂ ಅನೇಕ ಅಂಶಗಳು ಅಂಕಗಳಂತೆ ತನ್ನ ಬುದ್ಧಿಗೆ ಹೊಳೆದಿದ್ದಂತೆ ಒಳಗೆ ಕುತೂಹಲದ ಅಲೆಯನ್ನೆಬ್ಬಿಸಿದ್ದವು. ತನ್ನ ಮಹದುದ್ದೇಶದ ಮಹತ್ಕಾರ್ಯಕ್ಕೆ ರಾಜೇಶ್ವರಿಯಮ್ಮನ ಏಕ್‌ದಮ್ ನೀರಸವೆನಿಸುವಂತಾದ ಪ್ರತಿಕ್ರಿಯೆ ಮುಜುಗರ ಹುಟ್ಟಿಸತೊಡಗಿತ್ತು. ನಡೆದೇ ನಡೆದು ಹೋದ ರಾಜೇಶ್ವರಿಯಮ್ಮ ಮಾಯವಾದ ಎಡದಿಕ್ಕಿನ ಉದ್ದನೆಯ ಜಾಗವನ್ನು ಕುತ್ತಿಗೆ ಹೊರಳಿಸಿ ನೋಡುತ್ತಲೇ ಇದ್ದವಳು ಸೆಳಕಿಗಿಟ್ಟುಕೊಂಡ ತನ್ನ ಕುತ್ತಿಗೆಯನ್ನು ಶಾಲೆಯ ಪಿಇ ಮೇಷ್ಟ್ರು ಹೇಳಿಕೊಟ್ಟಂತೆ ಗೋಲಾಕಾರ ಹೊರಳಿಸಿ, ಈಗ ಸರಿಯಾಯಿತೆ ಎನ್ನುವಂತೆ ಕಣ್ಮುಚ್ಚಿ ಕುತ್ತಿಗೆಯ ಭಾಗವನ್ನು

